


## ಅನಿರೀಕ್ಷಿತವಾಗಿ ನಿರುದ್ಯೋಗಿಗಳಾಗಿರುವ ಯಂತ್ರಮಾನವರು

# ಬಲು ಅಪರೂಪ ಈ ಜೋಡಿ...

ಮಿರಾಯ್‌ಟೊವ ಮತ್ತು ಸೊಮೈಟಿ ಎನ್ನುವ ಈ ರೊಬೋಟ್‌ಗಳು ಸಮಯಕ್ಕೆ ಸರಿಯಾಗಿ ಟೋಕಿಯೊ ಒಲಿಂಪಿಕ್ಸ್ ನಡೆದಿದ್ದರೆ ಕ್ರೀಡಾಕೂಟದ ಪ್ರಮುಖ ಆಕರ್ಷಣೆಯಾಗಿರುತ್ತಿದ್ದರು. ಅತಿಥಿಗಳು ಹಾಗೂ ಕ್ರೀಡಾಪ್ರೇಮಿಗಳ ಕಣ್ಮಣಿಗಳಾಗಿರುತ್ತಿದ್ದರು. ಆದರೆ, ಕೊರೊನಾದಿಂದಾಗಿ ಕ್ರೀಡಾಕೂಟ ಮುಂದಕ್ಕೆ ಹೋಗಿದೆ, ಸದ್ಯಕ್ಕೆ ಈ ಜೋಡಿ ನಿರುದ್ಯೋಗ ಅನುಭವಿಸುತ್ತಿದೆ.

■ ಗುರುರಾಜ್ ಎಸ್. ದಾವಣಗೆರೆ

ಇವರಿಬ್ಬರದು ಅಂತಿಂಥ ಜೋಡಿಯಲ್ಲ! ಬಾಲಿವುಡ್‌ನ ಭಲೇ ಜೋಡಿ ಜೈ–ವೀರೂ, ಕಾರ್ಟೂನ್ ಜಗತ್ತಿನ ಟಾಮ್ ಅಂಡ್ ಜೆರ್ರಿ, ಹಾಲಿವುಡ್‌ನ ಲಾರೆಲ್ ಅಂಡ್ ಹಾರ್ಡಿ, ನಮ್ಮ ಕನ್ನಡ ಸಿನಿಮಾದ ಬಾಲಣ್ಣ–ನರಸಿಂಹರಾಜು ಅವರನ್ನು ನೆನಪಿಸಬಲ್ಲ ಸೂಪರ್ ಜೋಡಿ ಇದು. ಎಲ್ಲವೂ ಅಂದುಕೊಂಡಂತೆ ನಡೆದು, 2020ರ ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟ ಜರುಗಿದ್ದರೆ ಜಗತ್ತಿನ ಎಲ್ಲ ಪ್ರಮುಖ ಪತ್ರಿಕೆ, ಮ್ಯಾಗಝಿನ್, ಫೇಸ್‌ಬುಕ್, ಇನ್ಸ್ಟಗ್ರಾಂಗಳಲ್ಲಿ ಇವರಿಬ್ಬರು ಲಕಲಕನೆ ಮಿಂಚುತ್ತಿದ್ದರು. ಕೋಟ್ಯಂತರ ಜನರ ವಾಟ್ಸಾಪ್ ಡಿಪಿಗಳಲ್ಲಿ ಕಂಗೊಳಿಸುತ್ತಿದ್ದರು. ಮಕ್ಕಳ ನೋಟ್ ಬುಕ್, ಜ್ಯಾಮಿಟ್ರಿ ಬಾಕ್ಸ್, ಸ್ಟಡಿ ರೂಂ, ಬಳಸುವ ಟವೆಲ್, ಬೆಡ್‌ಶೀಟ್‌ಗಳ ಮೇಲೆಲ್ಲ ಇವರಿಬ್ಬರ ಚಿತ್ರಗಳೇ ರಾರಾಜಿಸುತ್ತಿದ್ದವು. ಆದರೆ ಕೊರೊನಾ ವೈರಾಣು ಎಲ್ಲವನ್ನೂ ತಲೆಕೆಳಗು ಮಾಡಿದೆ. ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾದ ಅನೇಕರಂತೆ ಈ ಜೋಡಿಯೂ ಮೂಲೆ ಹಿಡಿದು ಸಪ್ಪಗೆ ಕುಳಿತಿದೆ. 'ಯಜಮಾನರೇ ಸುಮ್ಮನಿರುವಾಗ ನಮ್ಮದೇನು ಮಹಾ?' ಎನ್ನುವಂತೆ ಸುಮ್ಮನೆ ಓಡಾಡಿಕೊಂಡಿದ್ದಾರೆ.

ಅಂದಹಾಗೆ, ಇವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಬಂದ ಅಥ್ಲೀಟ್‌ಗಳಲ್ಲ; ಸೋಲುಗೆಲುವಿನ ಪೀಪಿ ಊದುವ ರೆಫರಿಗಳೂ ಅಲ್ಲ. ಗೆದ್ದವರಿಗೆ ಮೆಡಲ್ ತೊಡಿಸುವ ಜನನಾಯಕರಲ್ಲ. ಅನ್ಯಗ್ರಹಗಳಿಂದ ಬಂದ ಏಲಿಯನ್‌ಗಳೂ ಅಲ್ಲ. ಕಳೆದು ಜುಲೈ 23ರಿಂದ ಆಗಸ್ಟ್ 8ರವರೆಗೆ ನಡೆಯಬೇಕಾಗಿದ್ದ 2020ರ ಒಲಿಂಪಿಕ್ಸ್ ಕ್ರೀಡಾಕೂಟದ ಅಧಿಕೃತ 'ಮ್ಯಾಸ್ಕಟ್'ಗಳು ಈ ಮಿರಾಯ್‌ಟೊವ ಮತ್ತು ಸೊಮೈಟಿ.

ರೆಗ್ಯುಲರ್ ಒಲಿಂಪಿಕ್ಸ್ ಪ್ರತಿನಿಧಿಸುವ ಮಿರಾಯ್‌ಟೊವ ಮತ್ತು ಪ್ಯಾರಾಲಿಂಪಿಕ್ಸ್ ಪ್ರತಿನಿಧಿಸುವ ಸೊಮೈಟಿ ಇಬ್ಬರೂ ಟೊಯೊಟಾ ಕಂಪನಿ ಸಿದ್ಧಪಡಿಸಿರುವ ರೊಬೋಟ್‌ಗಳು. ಕ್ರೀಡಾಕೂಟಕ್ಕೆ ಬರುವ ಎಲ್ಲರಿಗೂ ಹಸ್ತ ಲಾಘವ ನೀಡಿ ಸ್ವಾಗತಿಸುವ ಜವಾಬ್ದಾರಿ ಹೊತ್ತಿದ್ದ ಈ ಭಲೇಜೋಡಿ ಕೃತಕ ಬುದ್ಧಿಮತ್ತೆ ಮತ್ತು ರೊಬಾಟಿಕ್ ಇಂಜಿನಿಯರಿಂಗ್‌ನ ಅತ್ಯಂತ ಮುಂದುವರೆದ ತಂತ್ರಜ್ಞಾನದ ಮೂರ್ತರೂಪ.

### ಚುನಾವಣೆಯಲ್ಲಿ ಗೆದ್ದು ಬಂದರು!

ಏನೇ ಮಾಡಿದರೂ ಶಿಸ್ತಿಗೆ ಹೆಸರಾದ ಜಪಾನೀಯರು ತಾವು ಆಯೋಜಿಸುವ ಒಲಿಂಪಿಕ್ಸ್